# ರಾಷ್ಟ್ರ ಮತ್ತು ಧರ್ಮ ಪ್ರೇಮಿಗಳಾಗಿರಿ !

## ಮನೋಗತ



ಸೀತಾ ರಾಮಚಂದ್ರರ ಕರ್ತವ್ಯದಕ್ಷ ಭೂಮಿ ।
ಇಲ್ಲಿ ಪರಾಕ್ರಮದ ರಾಮಾಯಣಗಳು ಘಟಿಸಬೇಕು ।
ಹಿಮಾಲಯ ಪರ್ವತಗಳ ಶಿರ ಇನ್ನೂ ಎತ್ತರವಾಗಬೇಕು ।
ಸೂರ್ಯಚಂದ್ರರಿರುವ ವರೆಗೆ ಭಾರತ
ಸ್ವತಂತ್ರವಾಗಿರಬೇಕು ॥



ಕವಿವರ್ಯ ಗ.ದಿ. ಮಾಡಗೂಳಕರರ ಸ್ವಾತಂತ್ರ್ಯದ ಬಗೆಗಿನ ಈ ಭಾವನೆಯು ಎಷ್ಟು ಉದಾತ್ತವಾಗಿದೆ ! ಸ್ವಾತಂತ್ರ್ಯಪೂರ್ವ ಕಾಲದಲ್ಲಿ ರಾಷ್ಟ್ರಪುರುಷರು ಮತ್ತು ಕ್ರಾಂತಿಕಾರಿಗಳು ತಮ್ಮ ಪ್ರಾಣವನ್ನು ದೇಶಕ್ಕಾಗಿ ಅರ್ಪಿಸದಿದ್ದರೆ, ಇಂದು ನಾವು 'ಸ್ವತಂತ್ರ'ರೆಂದು ಗೌರವದಿಂದ ಜೀವಿಸಬಹುದಾಗಿತ್ತೇ ?

'ಇಂದಿನ ಮಕ್ಕಳೇ, ದೇಶದ ಭವಿಷ್ಯವಾಗಿದ್ದಾರೆ', ಎಂದು ಹೇಳುತ್ತಾರೆ. ಇಂದಿನ ಮಕ್ಕಳ ಬಾಯಿಯಲ್ಲಿ ಯಾವ ಹಾಡುಗಳಿರುತ್ತವೆ, ಎಂಬುದರ ಮೇಲೆ ದೇಶದ ಭವಿಷ್ಯ ಅವಲಂಬಿಸಿರುತ್ತದೆ ! ಹಿಂದೆ ಮಕ್ಕಳ ಬಾಯಿಯಲ್ಲಿ 'ದೇವರ ಶ್ಲೋಕ'ಗಳಿರುತ್ತಿದ್ದವು, ಆದರೆ ಈಗ 'ಪಾಪ್' ಹಾಡುಗಳಿರುತ್ತವೆ ! ಇಂದು ವ್ಯಾಯಾಮಶಾಲೆಗಳು ಮುಚ್ಚುತ್ತಿದ್ದು ಎಲ್ಲೆಡೆ 'ಡ್ಯಾನ್ಸ್ ಕ್ಲಾಸ್'ಗಳು ಪ್ರಾರಂಭವಾಗುತ್ತಿವೆ ! ಮಕ್ಕಳಿಗೆ ರಾಷ್ಟ್ರಪುರುಷರು ಮತ್ತು ಕ್ರಾಂತಿಕಾರಿಗಳು ಆದರ್ಶವೆನಿಸದೇ, ಚಲನಚಿತ್ರ ನಟ-ನಟಿಯರು ಮತ್ತು ಕ್ರೀಡಾಪಟುಗಳು ಆದರ್ಶವೆನಿಸುತ್ತಿದ್ದಾರೆ ! ರಾಷ್ಟ್ರ ಮತ್ತು ಧರ್ಮದ ಬಗ್ಗೆ ನಿಜವಾಗಿ ನಮಗೆಷ್ಟು ಅಭಿಮಾನವಿದೆ ? ಕೇವಲ ಶಾಲೆಯಲ್ಲಿ ರಾಷ್ಟ್ರಗೀತೆಯನ್ನು ಹಾಡುವುದರಿಂದ ಮತ್ತು ಹಬ್ಬಹರಿದಿನಗಳಲ್ಲಿ ದೇವರಿಗೆ ನಮಸ್ಕರಿಸುವುದರಿಂದ ಈ ಅಭಿಮಾನ ನಿರ್ಮಾಣವಾಗುವುದಿಲ್ಲ. ಅದಕ್ಕಾಗಿ ಮನಸ್ಸಿನಲ್ಲಿ ರಾಷ್ಟ್ರ ಮತ್ತು ಧರ್ಮದ ಬಗ್ಗೆ ಪ್ರೇಮ ನಿರ್ಮಾಣವಾಗಬೇಕಾಗುತ್ತದೆ.

ಮಕ್ಕಳೇ, ಕೇವಲ ಉತ್ತಮ ಶಿಕ್ಷಣವನ್ನು ಪಡೆದುಕೊಂಡು ಉತ್ತಮ ನೌಕರಿಯನ್ನು ಮಾಡಿ, ಪ್ರಾಮಾಣಿಕತನದಿಂದ ಜೀವನವನ್ನು ಜೀವಿಸಿದರೆ, ನಾವು 'ಆದರ್ಶ ನಾಗರಿಕ'ರಾಗುತ್ತೇವೆ, ಎಂದಿರುವುದಿಲ್ಲ. ಇಂದು ಇಷ್ಟು ವರ್ಷಗಳ ನಂತರವೂ ಛತ್ರಪತಿ ಶಿವಾಜಿ ಮಹಾರಾಜರಂತಹ ರಾಷ್ಟ್ರಪುರುಷರು ಮತ್ತು ಸಮರ್ಥ ರಾಮದಾಸಸ್ವಾಮಿಗಳಂತಹ ಧರ್ಮಪುರುಷರು ಎಲ್ಲರ ಸ್ಮರಣೆಯಲ್ಲಿದ್ದಾರೆ; ಏಕೆಂದರೆ ಅವರು ಆದರ್ಶರಾಗಿದ್ದರು. ಅವರು ರಾಷ್ಟ್ರ ಮತ್ತು ಧರ್ಮಕ್ಕಾಗಿ ಜೀವಿಸಿದ್ದರಿಂದ ಆದರ್ಶರಾಗಿದ್ದಾರೆ. ಮಕ್ಕಳೇ, ನಿಮಗೂ ಇತರರು 'ಆದರ್ಶ'ವೆಂದು ಹೇಳಬೇಕು ಎಂದೆನಿಸುತ್ತದೆಯಲ್ಲವೇ ? ಹಾಗಾದರೆ ಅದಕ್ಕಾಗಿ ರಾಷ್ಟ್ರ ಮತ್ತು ಧರ್ಮಪ್ರೇಮಿಯಾಗಬೇಕು. ರಾಷ್ಟ್ರ

ಮತ್ತು ಧರ್ಮಪ್ರೇಮಿಯಾಗಲು ಸರಳವಾದ ಸುಲಭ ಮಾರ್ಗದರ್ಶನವನ್ನು ಈ ಗ್ರಂಥದಲ್ಲಿ ಮಾಡಲಾಗಿದೆ.

ಇಂದು ನಮ್ಮ ದೇಶದಲ್ಲಿ ಭಯೋತ್ಪಾದನೆ, ಭ್ರಷ್ಟಾಚಾರ, ದಾರಿದ್ರ್ಯ, ನಿರುದ್ಯೋಗ, ಮಹಿಳೆಯರ ಮೇಲಿನ ಅತ್ಯಾಚಾರ ಮುಂತಾದ ಅನೇಕ ಸಮಸ್ಯೆಗಳಿವೆ. ನೇತಾರರು ಭಾರತವನ್ನು ಅಮೇರಿಕಾ, ಚೀನಾದಂತೆ ಶಕ್ತಿಶಾಲಿ ಸಮೃದ್ಧ ದೇಶವನ್ನು ಮಾಡುವ ಘೋಷಣೆಗಳನ್ನು ಮಾಡುತ್ತಾರೆ. ನಾವೂ ಅಂತಹ ಕನಸನ್ನು ಕಾಣುತ್ತೇವೆ. ಅಮೇರಿಕಾ ಮತ್ತು ಚೀನಾ ಶಕ್ತಿಶಾಲಿ ಮತ್ತು ಸಮೃದ್ಧ ದೇಶಗಳಾಗಿದ್ದರೂ ಈ ದೇಶ ಗಳಲ್ಲಿ ಕಳ್ಳತನ, ಭ್ರಷ್ಟಾಚಾರ, ಗೂಂಡಾಗಿರಿ, ದ್ರೋಹ, ಮೋಸ ಇತ್ಯಾದಿಗಳು ಇದ್ದೇ ಇವೆ. ಅಲ್ಲಿ ಹಣ ಮತ್ತು ಬಲವಿದೆ; ಆದರೆ ಆನಂದವಿಲ್ಲ ! ನಮಗೆ ಎಂತಹ ರಾಷ್ಟ್ರ ಬೇಕು ? ಸಮರ್ಥ ರಾಮದಾಸ ಸ್ವಾಮಿಗಳ ಆಶೀರ್ವಾದದಿಂದ ಛ. ಶಿವಾಜಿ ಮಹಾರಾಜರು ಸ್ಥಾಪಿಸಿದ ‘ಹಿಂದವೀ ಸ್ವರಾಜ್ಯ’ದಂತಹ ರಾಷ್ಟ್ರ ಬೇಕು.

ಕಾಡು, ನಾಡು, ಎಲ್ಲೆಲ್ಲಿಯೂ ಆನಂದವೋ ಆನಂದ ! ಎಲ್ಲರಿಗೂ ಆನಂದವನ್ನು ಕೊಡುವ ರಾಜ್ಯವನ್ನು ಶಿವಾಜಿ ಮಹಾರಾಜರು ಹೇಗೆ ಸ್ಥಾಪಿಸಿದರು ? ಬಾಹುಬಲವು ಒಂದು ಕಾರಣವಾಗಿದ್ದರೆ, ಧರ್ಮಬಲವು ಇನ್ನೊಂದು ಕಾರಣವಾಗಿದೆ. ಸಮರ್ಥ ರಾಮದಾಸ ಸ್ವಾಮಿಗಳಂತಹ ಸಂತರು ಮಹಾರಾಜರಿಗೆ ಆಶೀರ್ವಾದ ನೀಡಿದರು; ಏಕೆಂದರೆ ಅವರು ಧರ್ಮಕ್ಕನುಸಾರ ನಡೆದುಕೊಳ್ಳುತ್ತಿದ್ದರು. ಮಹಾರಾಜರು ಧರ್ಮಕ್ಕನುಸಾರ ನಡೆದುಕೊಳ್ಳುತ್ತಿದ್ದುದರಿಂದ ಅವರ ಪ್ರಜೆಗಳೂ ಧರ್ಮದಂತೆ ನಡೆದುಕೊಳ್ಳುತ್ತಿದ್ದರು. ಇದರ ಪರಿಣಾಮವೆಂದು ‘ಹಿಂದವೀ ಸ್ವರಾಜ್ಯ’ವು ಎಲ್ಲ ದೃಷ್ಟಿಯಿಂದ ಆದರ್ಶ ಮತ್ತು ಆನಂದದಿಂದ ಕೂಡಿದ ರಾಜ್ಯವಾಗಿತ್ತು.

ಮಕ್ಕಳೇ, ನೀವೂ ರಾಷ್ಟ್ರಪುರುಷರು, ಸಂತರು ಮತ್ತು ರಾಮ-ಕೃಷ್ಣ ರಂತಹ ದೇವತೆಗಳ ಆದರ್ಶವನ್ನು ಮುಂದಿಟ್ಟುಕೊಂಡರೆ, ಧರ್ಮಾಚರಣೆ ಮಾಡಿದರೆ, ನೈತಿಕ ಮೌಲ್ಯಗಳನ್ನು ಜೋಪಾನ ಮಾಡಿ ಶಿಕ್ಷಣ ಪಡೆದರೆ ಮತ್ತು ಆ ಶಿಕ್ಷಣವನ್ನು ರಾಷ್ಟ್ರ ಮತ್ತು ಧರ್ಮದ ಸೇವೆಗಾಗಿ ವಿನಿಯೋಗಿಸಿದರೆ, ಖಂಡಿತವಾಗಿ ಭಾರತದಲ್ಲಿ ಪುನಃ ‘ಹಿಂದವಿ ಸ್ವರಾಜ್ಯ’ (ಆದರ್ಶ ರಾಜ್ಯ) ಸ್ಥಾಪನೆಯಾಗುವುದು. ಹೀಗೆ ‘ಸುರಾಜ್ಯವನ್ನು ಸ್ಥಾಪಿಸುವುದೇ’ ನಿಮ್ಮ ನಿಜವಾದ ‘ಕರಿಯರ್’ ಆಗಿದೆ, ಎಂಬುದನ್ನು ಗಮನದಲ್ಲಿಡಿ !

ಈ ಗ್ರಂಥವನ್ನು ಓದಿ ಎಲ್ಲರೂ ಧರ್ಮಾಚರಣಿಗಳು ಮತ್ತು ರಾಷ್ಟ್ರಭಕ್ತರಾಗಿ ಅವರಿಗೆ ರಾಷ್ಟ್ರ ಮತ್ತು ಧರ್ಮದ ಬಗೆಗಿನ ಕರ್ತವ್ಯವನ್ನು ಪಾಲಿಸಲು ಪ್ರೇರಣೆಯು ದೊರೆಯಲಿ, ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ ! - **ಸಂಕಲನಕಾರರು**

## ಅನುಕ್ರಮಣಿಕೆ

(ಕೆಲವು ಮಹತ್ವದ ಅಂಶಗಳನ್ನು '*' ಈ ಗುರುತಿನಲ್ಲಿ ಕೊಡಲಾಗಿದೆ.)


**೧. ಮಕ್ಕಳೇ, ರಾಷ್ಟ್ರ ಮತ್ತು ಧರ್ಮದ ಬಗೆಗಿನ ನಮ್ಮ ಕರ್ತವ್ಯಗಳನ್ನು ಅರಿತುಕೊಳ್ಳಿರಿ ! ೧೪**

**೨. ಮಾತೃಭಾಷಾಭಿಮಾನವು ರಾಷ್ಟ್ರಾಭಿಮಾನ ಮತ್ತು ಧರ್ಮಾಭಿಮಾನದ ಅಡಿಪಾಯವಾಗಿದೆ ! ೧೯**

**೩. ಸ್ವದೇಶೀಯನ್ನು ಅವಲಂಬಿಸಿರಿ ಮತ್ತು ರಾಷ್ಟ್ರಾಭಿಮಾನವನ್ನು ವೃದ್ಧಿಸಿರಿ ! ೩೧**

* ವಿದೇಶಿ ವಸ್ತುಗಳನ್ನು ಉಪಯೋಗಿಸುವುದರಿಂದ ಭಾರತಕ್ಕಾಗುತ್ತಿರುವ ನಷ್ಟ ೩೨
* ಸ್ವದೇಶೀ ವಸ್ತುಗಳನ್ನು ಪುರಸ್ಕರಿಸುವ ರಾಷ್ಟ್ರಪುರುಷರ ಆದರ್ಶವನ್ನಿಡಿ ! ೩೩

**೪. ರಾಷ್ಟ್ರಾಭಿಮಾನ ಹೆಚ್ಚಿಸಲು ಈ ಕೃತಿಗಳನ್ನೂ ಮಾಡಿರಿ ! ೪೩**

* ರಾಷ್ಟ್ರಪುರುಷರ ಚರಿತ್ರೆಗಳನ್ನು ಓದಿರಿ ಮತ್ತು ಅವರ ಆದರ್ಶನ್ನಿಡಿರಿ ! ೪೩
* ರಾಷ್ಟ್ರಧ್ವಜದ ಮತ್ತು ಭಗವಾಧ್ವಜದ ಗೌರವವನ್ನು ಕಾಪಾಡಿರಿ ! ೪೪
* ರಾಷ್ಟ್ರಗೀತೆಗಳ ಗೌರವವನ್ನು ಕಾಪಾಡಿರಿ ! ೫೦
* ಶಿವಾಜಿ ಮಹಾರಾಜರ ಕೋಟೆಗಳಿಗೆ ಪ್ರತ್ಯಕ್ಷ ಭೇಟಿ ನೀಡಿರಿ ! ೫೩
* ಪಠ್ಯಪುಸ್ತಕಗಳಲ್ಲಿನ ಸುಳ್ಳು ಇತಿಹಾಸವನ್ನು ವಿರೋಧಿಸಿರಿ ! ೫೪
* ನಿಜವಾದ ವೈಭವಶಾಲಿ ಇತಿಹಾಸವನ್ನು ಅರಿತುಕೊಳ್ಳಿರಿ ! ೫೫
* ಅಲೆಕ್ಸಾಂಡರ್ ಜಗತ್ತನ್ನು ಬಿಡಿ; ಹಿಂದೂಸ್ಥಾನ ವಿಜೇತನೂ ಆಗಿರಲಿಲ್ಲ ! ೫೬
* ವೈಜ್ಞಾನಿಕ ಸಂಶೋಧನೆಗಳ ಜನಕರಾದ ಹಿಂದೂಗಳ ಪೂರ್ವಜರು ! ೫೭

**೫. ಧರ್ಮಪ್ರೇಮವನ್ನು ಹೆಚ್ಚಿಸಿರಿ ಮತ್ತು ಧರ್ಮಾಭಿಮಾನಿಗಳಾಗಿರಿ ! ೫೮**

**೬. ರಾಷ್ಟ್ರಹಿತ ಮತ್ತು ಧರ್ಮಹಿತಕ್ಕಾಗಿ ಈ ಪ್ರಯತ್ನಗಳನ್ನೂ ಮಾಡಿರಿ ! ೭೯**

* ಪಟಾಕಿಗಳಿಂದಾಗುವ ವ್ಯಕ್ತಿ, ರಾಷ್ಟ್ರ ಮತ್ತು ಧರ್ಮಹಾನಿ ತಡೆಗಟ್ಟಿರಿ ! ೮೧
* ನಿಯಮಿತವಾಗಿ ವ್ಯಾಯಾಮ ಮಾಡಿರಿ, ಹಾಗೆಯೇ ಸ್ವರಕ್ಷಣೆಯ ತರಬೇತಿಯನ್ನೂ ಪಡೆಯಿರಿ ! ೮೩
* ಸಂಚಾರಿವಾಣಿಯಿಂದ ('ಮೊಬೈಲ್'ನಿಂದ) ರಾಷ್ಟ್ರ ಮತ್ತು ಧರ್ಮ ಇವುಗಳ ಬಗ್ಗೆ ಕಿರುಸಂದೇಶ (ಎಸ್.ಎಮ್.ಎಸ್.) ಗಳನ್ನು ಕಳುಹಿಸಿರಿ ! ೮೪
* ಅಂತರ್ಜಾಲವನ್ನು ('ಇಂಟರ್‌ನೆಟ್'ನ್ನು) ಯೋಗ್ಯ ರೀತಿಯಲ್ಲಿ ಬಳಸಿ ! ೮೫

**೭. ರಾಷ್ಟ್ರರಕ್ಷಣೆ ಮತ್ತು ಧರ್ಮಜಾಗೃತಿಯ ಚಳುವಳಿಗಳಲ್ಲಿ ಪಾಲ್ಗೊಳ್ಳಿರಿ ! ೮೬**